<u>**O.S.No. 258/2018 – P.W. 1**</u>

<u>**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 05.02.2025**</u>

<u>**ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**</u>

ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

ನೊಂದಾಯಿತ ಕ್ರಯ ಪತ್ರ ದಿನಾಂಕ 22.11.2007 ರ ದೃಡೀಕೃ ನಕಲನ್ನು ನಿಪಿ-1 ಎಂದು, ನೊಂದಾಯಿತ ಕ್ರಯ ಪತ್ರ ದಿನಾಂಕ 20.02.2008 ರ ದೃಡೀಕೃ ನಕಲನ್ನು ನಿಪಿ-2 ಎಂದು, ನೊಂದಾಯಿತ ಕ್ರಯ ಪತ್ರ ದಿನಾಂಕ 18.06.2009 ರ ದೃಡೀಕೃ ನಕಲನ್ನು ನಿಪಿ-3 ಎಂದು, ದಾವ ಸ್ವತ್ತಿನ ಪಹಣಿ ಪತ್ರಿಕೆಯನ್ನು ನಿಪಿ-4 ಎಂದು, ಪ್ರಾಪರ್ಟಿ ಎಕ್ಸಟ್ರ್ಯಾಕ್ಟ್‌ಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

**( ವಾದಿ ಪರ ವಕೀಲರು ಕೋರಿಕೆಯ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 28.01.2025**

**ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

ನೋಂದಾಯಿತ ಕ್ರಯ ಪತ್ರದ ದಿಃ 01-08-2007 ರ ಗಣಕೀಕೃತ ಪ್ರತಿಯನ್ನು ನಿಪಿ 28 ಎಂದು, ಕೃಷ್ಣಪ್ಪನವರ ಮರಣ ಪ್ರಮಾಣ ಪತ್ರವನ್ನು ನಿಪಿ 29 ಎಂದು, ತೆರಿಗೆ ಪಾವತಿ ರಶೀದಿಯನ್ನು ನಿಪಿ 30 ಎಂದು, ಪಟ್ಟಾ ಮತ್ತು ರಶೀದಿ ಪುಸ್ತಕವನ್ನು ನಿಪಿ 31 ಎಂದು, ಪಹಣಿ ಪತ್ರಿಕೆಯನ್ನು ನಿಪಿ 32 ಎಂದು, ದೇವನಹಳ್ಳಿ ತಹಶಿಲ್ದಾರ್ ರವರ ಆದೇಶದ ದೃಡಿಕೃತ ನಕಲನ್ನು ನಿಪಿ 33 ಎಂದು, ಮಹಜರ್ ವರದಿಯನ್ನು ನಿಪಿ 34 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯವಿಚಾರಣೆಗೆ ಸಮಯವಕಾಶ ನೀಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ**

**O.S.No. 258/2018 – P.W. 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 30.01.2025**

**ಮುಖ್ಯ ವಿಚಾರಣೆ - ಪ್ರತಿವಾದಿಯ ಪರ ವಕೀಲರಿಂದ :**

ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

**(ಮುಂದುವರೆದ ಮುಖ್ಯವಿಚಾರಣೆಗೆ ಸಮಯವಕಾಶ ನೀಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹ**

**<u>O.S.No. 258/2018 – P.W. 1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 30.01.2025</u>**

**<u>ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :</u>**

2 ನೇ ವಾದಿಯ 10 ನೇ ತರಗತಿಯ ಅಂಕ ಪಟ್ಟಿಯನ್ನು ನಿಪಿ 14 ಎಂದು ಹಾಗೂ ಸಾಕ್ಷಿದಾರರ ದ್ವಿತೀಯ ಪಿ.ಯು.ಸಿ ಅಂಕ ಪಟ್ಟಿಯನ್ನು ನಿಪಿ 15 ಎಂದು ಗುರುತಿಸಲಾಯಿತು.

**(ಪ್ರತಿವಾದಿಯ ಪರ ಕೋರಿಕೆಯ ಮೇರೆಗೆ ಮುಂದುವರೆದ ವಾಟಿ ಸವಾಲಿಗೆ ಕಾಲವಕಾಶ ನೀಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**

**O.S.No. 258/2018 – P.W. 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 30.01.2025**

**ಮುಂದುವರೆದ ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

ತಹಶೀಲ್ದಾರ್ ರವರ ಆದೇಶದ ದೃಡಿಕೃತ ನಕಲನ್ನು ನಿಪಿ 3 ಎಂದು, ಮ್ಯುಟೇಶನ್ ರಿಜಿಸ್ಟರ್ ನ ಎಕ್ಸ್‌ಟ್ರಾಕ್ಟ್ ಅನ್ನು ನಿಪಿ 4 ಎಂದು, ಐ.ಹೆಚ್.ಆರ್. ಆದೇಶ ಸಂಖ್ಯೆ 15/1995-96 ರ ದೃಡಿಕೃತ ನಕಲನ್ನು ನಿಪಿ 5 ಎಂದು, ಮ್ಯುಟೇಶನ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ಅನ್ನು ನಿಪಿ 6 ಎಂದು, ಸರ್ವೆ ಸಂಖ್ಯೆ 397 ರ 4 ಪಹಣಿ ಪತ್ರಿಕೆಗಳನ್ನು ನಿಪಿ 7 ರಿಂದ 10 ಎಂದು, ಸರ್ವೆ ಸಂಖ್ಯೆ 6 ರ 3 ಪಹಣಿ ಪತ್ರಿಕೆಗಳನ್ನು ನಿಪಿ 11 ರಿಂದ 13 ಎಂದು, ಸರ್ವೆ ಸಂಖ್ಯೆ 64 ರ 4 ಪಹಣಿ ಪತಿರಕೆಗಳನ್ನು ನಿಪಿ 14 ರಿಂದ 17 ಎಂದು, ಸರ್ವೆ ನಂ. 59 ರ 2 ಪಹಣಿ ಪತ್ರಿಕೆಗಳನ್ನು ನಿಪಿ 18 ಮತ್ತು 19 ಎಂದು, ನೋಂದಾಯಿತ ಕ್ರಯ ಪತ್ರ ದಿಃ 27-01-2004 ರ ದೃಡಿಕೃತ ನಕಲನ್ನು ನಿಪಿ 20 ಎಂದು, ನೋಂದಾಯಿತ ಕ್ರಯ ಪತ್ರ ದಿಃ 18-10-2004 ರ ದೃಡಿಕೃತ ನಕಲನ್ನು ನಿಪಿ 21 ಎಂದು, ನೋಂದಾಯಿತ ಕ್ರಯ ಪತ್ರ ದಿಃ 18-07-2005 ರ ದೃಡಿಕೃತ ನಕಲನ್ನು ನಿಪಿ 22 ಎಂದು, ನೋಂದಾಯಿತ ಕ್ರಯ ಪತ್ರ ದಿಃ 18-08-2004 ರ ದೃಡಿಕೃತ ನಕಲನ್ನು ನಿಪಿ 23 ಎಂದು, ನೋಂದಾಯಿತ ಕ್ರಯ ಪತ್ರ ದಿಃ 06-10-2004 ರ ದೃಡಿಕೃತ ನಕಲನ್ನು ನಿಪಿ 24 ಎಂದು, ನೋಂದಾಯಿತ ಕ್ರಯ ಪತ್ರ ದಿಃ 06-10-2004 ರ ದೃಡಿಕೃತ ನಕಲನ್ನು ನಿಪಿ 25 ಎಂದು, ನೋಂದಾಯಿತ ಕ್ರಯ ಪತ್ರ ದಿಃ 20-11-2004 ರ ದೃಡಿಕೃತ ನಕಲನ್ನು ನಿಪಿ 26 ಎಂದು ಎಂದು ಗುರುತಿಸಲಾಯಿತು.

**(ವಾದಿ ಪರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 30.01.2025**

**ಪಾಟೀ ಸವಾಲು - 9 ರಿಂದ 11 ನೇ ಪ್ರತಿವಾದಿಗಳ ಪರ ವಕೀಲರಿಂದ :**

ದಾವಾ ಸ್ವತ್ತುಗಳು ನಮ್ಮ ತಾತನ ಸ್ವತ್ತುಗಳು. ಸದರಿ ಸ್ವತ್ತುಗಳು ನಮ್ಮ ತಾತನ ಹೆಸರಿನಲ್ಲಿ ಇದ್ದವು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೆನೋ ಇಲ್ಲವೊ ನನಗೆ ಗೊತ್ತಿಲ್ಲ. ಸರ್ವೆ ಸಂಖ್ಯೆ 140 ಲ್ಲಿ ನಮ್ಮ ತಂದೆ ಹೆಸರಿನಲ್ಲಿ ಒಟುಟ 10 ಗುಂಟೆ ಜಮೀನು ಇತ್ತು. ಸದರಿ ಸ್ವತ್ತಿನ ಹೊರತಾಗಿ ನಮ್ಮ ತಾತನ ಹೆಸರಿನಲ್ಲಿ ಅಥವ ತಂದೆ ಹೆಸರಿನಲ್ಲಿ ಬೇರೆ ಯಾವುದೇ ಒಟ್ಟು ಕುಟುಂಬದ ಸ್ವತ್ತುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಈ ದಾವೆ ಸಲ್ಲಿಸುವ ಪೂರ್ವದಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದವು. ಎಲ್ಲಾ ದಾವಾ ಸ್ವತ್ತುಗಳು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ನಮ್ಮ ತಂದೆ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನಮ್ಮ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ತಂದೆಯ ಜೀವಿತಾವಧಿಯಲ್ಲಿ ಸರ್ವೆ ಸಂಖ್ಯೆ 140 ರಲ್ಲಿ ಕೇವಲ 10 ಗುಂಟೆ ಎಂದು ಮಾತ್ರ ಇತ್ತು ಎಂದರೆ ಸರಿ. ನಮ್ಮ ತಂದೆ ಮರಣ ಹೊಂದಿದಾಗ ನನ್ನ ಸಹೋದರರು ಪವತಿ ಖಾತೆ ಮಾಡಿಕೊಳ್ಳುವಾಗ ನಾನು ತಕರಾರು ಸಲ್ಲಿಸಿದ್ದೆನು ಎಂದರೆ ಸರಿ. ದೇವನಹಳ್ಳಿ ತಹಶಿಲ್ದಾರ್ ರವರು ನನಗೆ ಮತ್ತು ನನ್ನ ಸಹೋದರರಿಗೆ ನೋಟಿಸ್ ನೀಡಿ ಪ್ರಕರಣ ನಡೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಸದರಿ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದು ಒಪ್ಪಿ ಕೊಂಡು ಅದನುವ್ನ **ನಿಡಿ 1** ಎಂದು ಗುರುತಿಸಲಾಯಿತು. ಆದರೆ ಯಾವ ಕಾರಣಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ತಹಶಿಲ್ದಾರಾರ್ ರವರ ಎದುರು ಸಹಿ ಮಾಡಿರುತ್ತೇನೆ. ನಾನು ಮತ್ತು ನನ್ನ ಸಹೋದರರು ತಹಶಿಲ್ದಾರ್ ರವರ ಎದುರು ನಾವು ರಾಜಿ ಮಾಡಿಕೊಂಡಂತೆ ಭಾಗ ಮಾಡಿಕೊಡುವಂತೆ ಕೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಪಹಣಿ ನನ್ನ ಸಹೋದರರ ಹೆಸರಿಗೆ ಬದಲಾವಣೆ ಆಗಿರುವ ಬಗ್ಗೆ ನನಗೆ 2022 ರಲ್ಲಿ ಗೊತ್ತಾಯಿತು. 1 ಮತ್ತು 8 ನೇ ಪ್ರತಿವಾದಿಗಳಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿರವರ ಭಾಗ ಜಮೀನನ್ನು ದಾನ ಪತ್ರ ಬರೆದುಕೊಟ್ಟ ನಂತರ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಭಾಗ ಮಾಡಿಕೊಂಡ ನಂತರ ನಮ್ಮ ನಮ್ಮ ಹಿಸೆಯ ಪಹಣಿ ನಮ್ಮ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಆದರೆ ನಾನು ಅದಕ್ಕೆ ಒಪ್ಪಿ ಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಪಹಣಿ 2017 ರಲ್ಲಿ ಬದಲಾವಣೆಯಾಗಿದ್ದು

ಅದನ್ನು ನಾನು ಈ ದಾವೆಯ ಹೊರತಾಗಿ ಬೇರೆ ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ. ಸದರಿ ಪಹಣಿ ಎಲ್ಲಿ ತೋರಿಸಿದಂತೆ ಅವರವರು ಅವರವರ ಹಿಸೆಯಲ್ಲಿ ಅನುಭವ ಹೊಂದಿದ್ದು ಅದರಂತೆ ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ. ನಾನು ನನ್ನ ಸಹೋದರರು ಅವರ ಹೆಣ್ಣು ಮಕ್ಕಳ ಹೆಸರಿಗೆ ದಾನ ಪತ್ರ ಮಾಡಿರುತ್ತಾರೆ ಮತ್ತು ನಮಗೆ ಹೆಚ್ಚಿ ನ ಭಾಗ ನೀಡಿರುವುದಿಲ್ಲ ಎಂದು ಈ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಗಳು ಅವರ ಅನುಭೋಗದಂತೆ ಮಾಡಿದ ಸರ್ವೆ ನಕ್ಷೆಗಳನ್ನು ನಾನು ಇಲ್ಲಿವರೆಗೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳನ್ನು ಅಳತೆ ಮಾಡುವಾಗ ಎಲ್ಲರೂ ಸಹ ಸಹಿ ಮಾಡಿರುತ್ತೇವೆ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**( 7 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಲನ್ನು ಮುಂದೂಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,
ದೇವನಹಳ್ಳಿ.

**<u>O.S.No. 258/2018 – P.W. 1</u>**

**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.   ದಿನಾಂಕ : 30.01.2025</u>**

**<u>ಮುಂದುವರೆದ ಮುಖ್ಯ ವಿಚಾರಣೆ -   ವಾದಿಯ ಪರ ವಕೀಲರಿಂದ :</u>**

ಶುದ್ದ ಕ್ರಯದ ಕರಾರು ಪತ್ರ ದಿಃ 15-11-2006 ಅನ್ನು ಮುದ್ರಾಂಕ ಶುಲ್ಕ ಮತ್ತು ದಂಡವನ್ನು ಪಾವತಿಸಿರುವುದನ್ನು ಖಚಿತಪಡಿಸಿಕೊಂಡು ನಿಪಿ 2 ಎಂದು ಗುರುತಿಸಲಾಯಿತು. ಕ್ರಯದ ಕರಾರು ಪತ್ರದ ಷರಾವನ್ನು ನಿಪಿ 3 ಎಂದು, ಹಣ ಸಂದಾಯ ರಶೀದಿಗಳನ್ನು ನಿಪಿ 4 ಮತ್ತು 5 ಎಂದು, ಕಾನೂನು ನೋಟಿಸ್ ದಿಃ 15-04-2016 ರ ಕಛೇರಿ ಪ್ರತಿಯನ್ನು ನಿಪಿ 6 ಎಂದು, 14 ಅಂಚೆ ಸ್ವೀಕೃತಿಗಳನ್ನು ನಿಪಿ 7 ರಿಂದ 20 ಎಂದು, ಜಾರಿಯಾಗದೇ ವಾಪಸ್ಸು ಬಂದಿರುವ 4 ಅಂಚೆ ಲಕೋಟೆಗಳನ್ನು ನಿಪಿ 21 ರಿಂದ 24 ಎಂದು, ಸದರಿ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ನೋಟಿಸ್ ಪ್ರತಿಗಳನ್ನು ನಿಪಿ 21 (ಎ) ಇಂದ ನಿಪಿ 24 (ಎ) ಎಂದು, ಸಾಕ್ಷಿದಾರರ 6 ಪಾಸ್ ಪುಸ್ತಕಗಳನ್ನು ನಿಪಿ 25 ರಿಂದ 30 ಎಂದು, 9 ಅಕೌಂಟ್ ಲೆಡ್ಜರ್ ಎನ್ ಕ್ವಾರಿಗಳ ದೃಡಿಕೃತ ನಕಲುಗಳನ್ನು ನಿಪಿ 31 ರಿಂದ 39 ಎಂದು ಗುರುತಿಸಲಾಯಿತು.

**(ಪ್ರತಿವಾದಿಗಳ ಪರ ಕೋರಿಕೆಯ ಮೇರೆಗೆ ಪಾಟಿ ಸವಾಲಿಗೆ ಕಾಲವಕಾಶ ನೀಡಲಾಯಿತು)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**